# ಹಂಚಿ ತಿನ್ನೋಣ

ಅ. ಬಿಟ್ಟ ಸ್ಥಳ ತುಂಬಿರಿ. (Fill in the blanks)

೧. ನೀವು ಇಬ್ಬರು ಶಾಲೆಗೆ ಹೋಗುವ ಹುಡುಗರು.
೨. ಜಗಳ ಮಾಡಿ ಏನು ಲಾಭವಾಯಿತು ?
೩. ನಿಮ್ಮಲ್ಲಿ ತಪ್ಪನ್ನು ತಿದ್ದಿಕೊಳ್ಳುವ ಮನಸ್ಸಿದೆ ಅಲ್ಲವೇ?
೪. ಆ ಹಣ್ಣನ್ನು ಹಂಚಿ ತಿಂದಿದ್ದರೆ ಇಬ್ಬರಿಗೂ ಸಂತೋಷವಾಗುತ್ತಿತ್ತು.

ಆ. ಕೆಳಗಿನ ವಾಕ್ಯಗಳಲ್ಲಿ ತಪ್ಪಾಗಿರುವುದನ್ನು ಸರಿಪಡಿಸಿರಿ. (Correct the wrong ones)

೧. ಬಾಲು ಮತ್ತು ಸೇತು ಒಂದೇ ಮನೆಯಲ್ಲಿ ವಾಸ ಮಾಡುತ್ತಿದ್ದರು.
ಉ: ಬಾಲು ಮತ್ತು ಸೇತು ಒಂದೇ ವಠಾರದಲ್ಲಿ ವಾಸ ಮಾಡುತ್ತಿದ್ದರು.
೨. ನಮ್ಮ ಅಂಗಳದಲ್ಲಿ ಬಿದ್ದ ಹಣ್ಣು.
ಉ: ನಮ್ಮ ಹಿತ್ತಲಲ್ಲಿ ಬಿದ್ದ ಹಣ್ಣು.
೩. ಬಾಲುವಿನ ಕೈಯಿಂದ ಕದಿಯಲು ನೋಡಿದನು.
ಉ: ಬಾಲುವಿನ ಕೈಯಿಂದ ಕಸಿಯಲು ನೋಡಿದನು.
೪. ಹಿರಿಯರು ಕೈಯಲ್ಲಿದ್ದ ಕಲ್ಲು ಬೀಸಿ ಹಣ್ಣು ಇನ್ನೊಂದು ಬೀಳಿಸಿದರು.
ಉ: ಹಿರಿಯರು ಕೈಯಲ್ಲಿದ್ದ ಬೆತ್ತ ಬೀಸಿ ಹಣ್ಣು ಇನ್ನೊಂದು ಬೀಳಿಸಿದರು.

FOR KANNADA
ಕನ್ನಡಕ್ಕಾಗಿ ಇಲ್ಲಿ

ಇ. ಒಂದು ವಾಕ್ಯದಲ್ಲಿ ಉತ್ತರಿಸಿ. (Answer the following in one sentence)

೧. ಮಾವಿನ ಮರ ಎಲ್ಲಿತ್ತು?
ಉ: ಮಾವಿನ ಮರ ಬಾಲುವಿನ ಮನೆಯ ರಸ್ತೆಗೆ ತಾಗಿ ಇತ್ತು.
೨. ಹಣ್ಣು ನೋಡಿ ಯಾರಿಗೆ ಆಸೆಯಾಯಿತು?
ಉ: ಹಣ್ಣು ನೋಡಿ ಸೇತುವಿಗೆ ಆಸೆಯಾಯಿತು.
೩. ಸೇತು ಮಾವಿನ ಹಣ್ಣು ನೋಡಿ ಏನು ಮಾಡಿದ?
ಉ: ಸೇತು ಮಾವಿನ ಹಣ್ಣು ನೋಡಿ ಕಲ್ಲು ಒಗೆದನು.

೪. ಮಕ್ಕಳ ಜಗಳವನ್ನು ಯಾರು ನೋಡಿದರು?

ಉ: ಮಕ್ಕಳ ಜಗಳವನ್ನು ಹಿರಿಯರು ನೋಡಿದರು.

ಈ . ಕೆಳಗಿನ ಮಾತುಗಳನ್ನು ಯಾರು ಯಾರಿಗೆ ಹೇಳಿದರು? (Who told to whom)

೧. "ಏ ಬಾಲು ಕೊಡೋ ಅದು ನನ್ನ ಹಣ್ಣು".

ಉ: ಯಾರು ಹೇಳಿದರು ?: ಸೇತು ಹೇಳಿದರು.
ಯಾರಿಗೆ ಹೇಳಿದರು?: ಬಾಲುವಿಗೆ ಹೇಳಿದರು.

೨. "ಹಣ್ಣು ಎಲ್ಲಿ ಬಿತ್ತು, ಹೇಳು"?

ಉ: ಯಾರು ಹೇಳಿದರು ?: ಬಾಲು ಹೇಳಿದರು.
ಯಾರಿಗೆ ಹೇಳಿದರು?: ಸೇತುವಿಗೆ ಹೇಳಿದರು.

೩. "ಕೊಡೋದಿಲ್ಲ ಏನೋ ಮಾಡ್ತೀಯಾ"

FOR KANNADA

ಉ: ಯಾರು ಹೇಳಿದರು ?: ಬಾಲು ಹೇಳಿದರು.
ಯಾರಿಗೆ ಹೇಳಿದರು?: ಸೇತುವಿಗೆ ಹೇಳಿದರು.

ಕನ್ನಡಕ್ಕಾಗಿ ಇಲ್ಲಿ ಬನ್ನಿ

೪. "ಯಾಕೆ ಮಕ್ಕಳೇ ಜಗಳ" ?

ಉ: ಯಾರು ಹೇಳಿದರು ?: ಹಿರಿಯರು ಹೇಳಿದರು.
ಯಾರಿಗೆ ಹೇಳಿದರು?: ಬಾಲು ಮತ್ತು ಸೇತುವಿಗೆ ಹೇಳಿದರು.

ಊ. ವಿರುದ್ಧ ಪದ ಬರೆಯಿರಿ. (Write the opposite words)

೧. ಆಸೆ X ನಿರಾಸೆ  ೨. ನಂಬಿಕೆ X ಅಪನಂಬಿಕೆ
೩.ಸಂದೇಹ X ನಿಸ್ಸಂದೇಹ ೪. ಅನುಕೂಲ Xಅನಾನುಕೂಲ

ಋ. ಕೆಳಗಿನ ಪ್ರಶ್ನೆಗಳಿಗೆ ಎರಡು ವಾಕ್ಯಗಳಲ್ಲಿ ಉತ್ತರ ಬರೆಯಿರಿ. (answer the following in two sentences)

೧. ಬಾಲು ಮತ್ತು ಸೇತು ನಡೆಸಿದ ಜಗಳವನ್ನು ವಿವರಿಸಿರಿ.

ಉ: ಬಾಲು ಮತ್ತು ಸೇತು ಜಗಳವಾಡಿದರು ನೆಲದ ಮೇಲೆ ಬಿದ್ದು ಹೊರಳಾಡಿದರು.

೨. ಹಿರಿಯರು ಮಕ್ಕಳಿಗೆ ನೀಡಿದ ಹಿತವಚನವೇನು?
ಉ: ಜಗಳ ಮಾಡಿ ಲಾಭವಿಲ್ಲ. ಹಂಚಿ ತಿಂದರೆ ಸಂತೋಷವಿದೆ ಎಂದು ಹಿರಿಯರು ಮಕ್ಕಳಿಗೆ ಹಿತವಚನ ನೀಡಿದರು.

ಎ. ಈ ಪದಗಳನ್ನು ಬಳಸಿ ಸ್ವಂತ ವಾಕ್ಯ ರಚಿಸಿರಿ. (Make your own sentences)

**ರಸ್ತೆ:** ರಸ್ತೆ ಬದಿಯಲ್ಲಿ ಮಾವಿನ ಮರವಿತ್ತು.
**ಹಿತ್ತಲು :** ಮನೆಯ ಹಿತ್ತಲಲ್ಲಿ ಮಾವಿನ ಮರವಿತ್ತು.
**ವಿಪರೀತ :** ಇಂದು ವಿಪರೀತ ಮಳೆ.
**ಬೆತ್ತ:** ತಾತನ ಕೈಯಲ್ಲಿ ಬೆತ್ತ ಇತ್ತು.

ಐ. ಗಾದೆ ಮಾತುಗಳನ್ನು ಪೂರ್ಣಗೊಳಿಸಿರಿ. (Complete the proverb)

೧. ಹಾಸಿಗೆ ಇದ್ದಷ್ಟು ಕಾಲು ಚಾಚು
೨. ಮೂರ್ತಿ ಚಿಕ್ಕದಾದರೂ ಕೀರ್ತಿ ದೊಡ್ಡದು
೩. ಕೊಟ್ಟದ್ದು ತನಗೆ ಬಚ್ಚಿಟ್ಟಿದ್ದು ಪರರಿಗೆ

FOR KANNADA
ಕನ್ನಡಕ್ಕಾಗಿ ಇಲ್ಲಿ ಬನ್ನಿ